# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ಪೂನಾ-ಬೆಂಗಳೂರು ರಾ.ಹೆ.-04,
ಭೂತರಾಮನಹಟ್ಟಿ, ಬೆಳಗಾವಿ-591 156,

**RANI CHANNAMMA UNIVERSITY**
Vidya Sangam, Poona-Bangalore N.H.-04
Bhutaramanahatti, Belagavi-591 156

## ಕಾಲೇಜು ಅಭಿವೃದ್ಧಿ ಮಂಡಳ ವಿಭಾಗ / College Development Council

ದೂರವಾಣಿ ಸಂಖ್ಯೆ: 0831-2565208/219, E-mail : directorcdcrcu@gmail.com, Website: www.rcub.ac.in


ಕ್ರಮ ಸಂಖ್ಯೆ: ರಾಚವಿ/ಬೆಳಗಾವಿ/ಸಿಡಿಸಿ ವಿಭಾಗ/2020-21/ 2530 . ದಿನಾಂಕ: 12 OCT 2020

ಗೆ,
ಪ್ರಾಚಾರ್ಯರು
ಬಿ. ಎಲ್. ಡಿ. ಇ. ಸಂಸ್ಥೆಯ,
ಎಸ್. ಬಿ. ಕಲಾ ಮತ್ತು ಕೆ. ಸಿ. ಪಿ. ವಿಜ್ಞಾನ ಮಹಾವಿದ್ಯಾಲಯ
ಪೋ: ವಿಜಯಪುರ-586 103
ತಾ/ಜಿ: ವಿಜಯಪುರ.

**ವಿಷಯ :** ಸಂಶೋಧನಾ ಕೇಂದ್ರ ಮುಂದುವರಿಕೆ ಮಂಜೂರಾತಿಗೆ ಸಂಬಂಧಿಸಿದಂತೆ ಅನುಪಾಲನಾ ವರದಿ ಕುರಿತು.

**ಉಲ್ಲೇಖ :** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 08-10-2020.

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಈ ಮೂಲಕ ತಮಗೆ ತಿಳಿಸುವುದೇನೆಂದರೆ ತಮ್ಮ ಮಹಾವಿದ್ಯಾಲಯದಲ್ಲಿಯ ರಸಾಯನಶಾಸ್ತ್ರ ವಿಷಯದ ಸಂಶೋಧನಾ ಕೇಂದ್ರ ಮಂಜೂರಾತಿಗೆ ಸಂಬಂಧಿಸಿದಂತೆ ತಾವು ಸಲ್ಲಿಸಿದ ಅರ್ಜಿಯನ್ನು ಪರಿಗಣಿಸಿ ತಮ್ಮ ಮಹಾವಿದ್ಯಾಲಯಕ್ಕೆ ಮಾನ್ಯ ಕುಲಪತಿಗಳಿಂದ ನಾಮನಿರ್ದೇಶನಗೊಂಡ ವಿಶ್ವವಿದ್ಯಾಲಯದ ಸ್ಥಳೀಯ ತನಿಖಾ ಸಮಿತಿಯನ್ನು ಕಳುಹಿಸಲಾಗಿತ್ತು. ಸದರಿ ಸಮಿತಿಯವರು ತಮ್ಮ ಮಹಾವಿದ್ಯಾಲಯಕ್ಕೆ ಭೇಟಿ ನೀಡಿ ತಮ್ಮಲ್ಲಿರುವ ಸಂಶೋಧನಾ ಕೇಂದ್ರದ ವಿಷಯಕ್ಕೆ ಮಂಜೂರಾತಿ ನೀಡುವುದಕ್ಕೆ ಅವಶ್ಯಕತೆ ಇರುವ ಮೂಲಭೂತ ಮತ್ತು ಶೈಕ್ಷಣಿಕ ಸೌಲಭ್ಯಗಳನ್ನು ಪರಿಶೀಲಿಸಿ, ಈ ಕೆಳಕಾಣಿಸಿದ ಕೆಲವೊಂದು ಶರತ್ತುಗಳನ್ನು ಪೂರೈಸಬೇಕೆನ್ನುವ ಶರತ್ತಿಗೆ ಒಳಪಟ್ಟು ತಮ್ಮ ಮಹಾವಿದ್ಯಾಲಯದಲ್ಲಿಯ ರಸಾಯನಶಾಸ್ತ್ರ ವಿಷಯಕ್ಕೆ ಸಂಶೋಧನಾ ಕೇಂದ್ರ ಮಂಜೂರಾತಿಗೆ ಶಿಫಾರಸ್ಸು ಮಾಡಿರುತ್ತಾರೆ.

ಇದಕ್ಕೆ ಸಂಬಂಧಿಸಿದಂತೆ ಸ್ಥಳೀಯ ತನಿಖಾ ಸಮಿತಿಯವರು ಈ ಕೆಳಕಾಣಿಸಿದ ಶರತ್ತುಗಳನ್ನು ಸಂಪೂರ್ಣವಾಗಿ ಹಾಗೂ ನಿರ್ದಿಷ್ಟವಾಗಿ ಪೂರೈಸಿರುವ ಬಗ್ಗೆ ಧೃಢಿಕರಿಸಿರುವ ದಾಖಲಾತಿಗಳೊಂದಿಗೆ ಅನುಪಾಲನಾ ವರದಿಯನ್ನು ದಿನಾಂಕ:24-10-2020 ರ ಒಳಗಾಗಿ, ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳ ವಿಭಾಗ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ವಿದ್ಯಾಸಂಗಮ, ಬೆಳಗಾವಿ, ಇವರಿಗೆ ಸಲ್ಲಿಸಲು ಸೂಚಿಸಲಾಗಿದೆ ಮತ್ತು ತಾವು ಸಲ್ಲಿಸಿದ ವರದಿಯು ತೃಪ್ತಿಕರವಾಗಿದ್ದ ಪಕ್ಷದಲ್ಲಿ ಸಂಶೋಧನಾ ಕೇಂದ್ರದ ಮಂಜೂರಾತಿ ನೀಡಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ. ಇದಕ್ಕೆ ಮುಂದುವರೆದು, ಸದರಿ ವಿಷಯದ ಸಂಶೋಧನಾ ಕೇಂದ್ರದ ಮಂಜೂರಾತಿಗೆ ಸಂಬಂಧಿಸಿದಂತೆ ಠೇವಣಿ ಶುಲ್ಕ ರೂ.1,00,000/- ಗಳನ್ನು ಸಿ.ಡಿ.ಸಿ. ವಿಭಾಗದ ಖಾತೆ ಸಂಖ್ಯೆಗೆ ಭರಿಸಿ ಚಲನ್ ಪ್ರತಿಯನ್ನು ಅನುಪಾಲನಾ ವರದಿಯ ಜೊತೆಗೆ ಲಗತ್ತಿಸಿ ಸಲ್ಲಿಸುವಂತೆ ಈ ಮೂಲಕ ತಿಳಿಸಲಾಗಿದೆ.

**ಪೂರೈಸಬೇಕಾದ ಷರತ್ತುಗಳ ವಿವರ:**

1. A separate fund must be earmarked for Research activity and improve the Laboratory Infrastructure.
2. The permanent faculty members in the Dept. of Chemistry are eligible to apply for recognition as Research Guides (Supervisor) as per RCU norms.
3. Research Centre must be subjected for continuous evaluation/affiliation as per RCU norms.
4. Separate Research Laboratory should be identified for dedicated Research work.

ನಿರ್ದೇಶಕರು
ಕಾಲೇಜು ಅಭಿವೃದ್ಧಿ ಮಂಡಳ


B.L.D.E.A's S.B.Arts & K.C.P.
Sci. College, Bijapur.
Inward No. 161